ಅಧ್ಯಕ್ಷರು: ಪಾಟೀಲರೇ ದಯವಿಟ್ಟು ಕೇಳಿ, R.D.P.R. ಬಗ್ಗೆ ನಾಲ್ಕು ದಿವಸ ಸುದೀರ್ಘವಾದಂಥ ಚರ್ಚೆಯಾಗಿದೆ. ಆ ಸಂದರ್ಭದಲ್ಲಿ ನೀವು ಇದನ್ನು ಪ್ರಸ್ತಾಪ ಮಾಡುವುದಕ್ಕೆ ಆಗಲಿಲ್ಲವೇ?

ಶಿವಾನಂದ ಎಸ್. ಪಾಟೀಲ್: 18 ಲಕ್ಷ ಶೌಚಾಲಯಗಳು ಸಿಕ್ಕಿಲ್ಲ ಎಂದು ಮಂತ್ರಿಗಳು ಉತ್ತರ ಕೊಟ್ಟಿರುವುದು ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಆದರೆ ಈ ಉತ್ತರದಲ್ಲಿ ಆ 18 ಲಕ್ಷವನ್ನೂ ಬರೆದಿಲ್ಲ, ಒಂದು ಲಕ್ಷವನ್ನೂ ಬರೆದಿಲ್ಲ.

ಅಧ್ಯಕ್ಷರು: ಅವರು ಏನು ಕೇಳಿದ್ದಾರೆ?

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್: ನಿರ್ಮಲ ಭಾರತ ಅಭಿಯಾನ ಯೋಜನೆಯಲ್ಲಿ ಶೌಚಾಲಯಗಳಿಗೆ ಸರಿಯಾಗಿ ಹಣ ಸಂದಾಯವಾಗಿಲ್ಲ ಎಂದು ಹೇಳಿದ್ದಾರೆ. ರಾಜ್ಯದಲ್ಲಿ ಎಷ್ಟೆಷ್ಟು ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದೇವೆ, ಯಾವ ಪ್ರಮಾಣದಲ್ಲಿ ಹಣ ಕೊಟ್ಟಿದ್ದೇವೆ ಎನ್ನುವುದನ್ನೆಲ್ಲ ಉತ್ತರದಲ್ಲಿ ಕೊಟ್ಟಿದ್ದೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್: ಅವ್ಯವಹಾರವಾಗಿರುವಂಥ ಗ್ರಾಮ ಪಂಚಾಯಿತಿಗಳ ಹೆಸರುಗಳನ್ನು ಕೇಳಿದ್ದೆ. ಎಷ್ಟು ಸಂಖ್ಯೆ ಎಂದು ಕೇಳಿದ್ದೆ. ಒಂದಕ್ಕೂ ಸ್ಪಷ್ಟವಾದ ಉತ್ತರವಿಲ್ಲ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ: ಇದಕ್ಕೆ ಸೋಮವಾರ ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರ ಕೊಡಿಸುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್: ಹಾಗಿದ್ದರೆ, ಇದನ್ನು ಸೋಮವಾರಕ್ಕೆ ಡೆಫರ್ ಮಾಡಿ.

ಅಧ್ಯಕ್ಷರು: ಆಯಿತು, ಸೋಮವಾರ ಉತ್ತರ ಕೊಡಿ.

8. ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ ವಾರ್ಡ ಸಂಖ್ಯೆ: 40 ಹಾಗೂ 72ರ

ಪ್ರದೇಶಗಳಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಬಗ್ಗೆ.

ಶ್ರೀ ಎಸ್. ಟಿ. ಸೋಮಶೇಖರ್(ಯಶವಂತಪುರ): ಮಾನ್ಯ ಅಧ್ಯಕ್ಷರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ ವಾರ್ಡ ಸಂಖ್ಯೆ:40 ಹಾಗೂ 72ರ ಪ್ರದೇಶಗಳಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ (ಮಾನ್ಯ ಸಹಕಾರ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ): ಮಾನ್ಯ ಅಧ್ಯಕ್ಷರೆ, ವಾರ್ಡ ಸಂಖ್ಯೆ 40 ಮತ್ತು 72, ಕ್ರಮವಾಗಿ ದೊಡ್ಡಬಿದರಕಲ್ಲು ಮತ್ತು ಹೇರೊಹಳ್ಳಿಗಳಿಗೆ ಸಂಬಂಧಪಟ್ಟಿದ್ದು, ದಾಸರಹಳ್ಳಿ ಹಿಂದಿನ ನಗರಸಭೆಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾದ 110 ಹಳ್ಳಿಗಳಲ್ಲಿ ಒಂದಾಗಿರುತ್ತವೆ.

ಈ ವಿಭಾಗಳಲ್ಲಿ ಜಲಮಂಡಳಿಯಿಂದ ನೀರು ಸರಬರಾಜು ವ್ಯವಸ್ಥೆ ಇರುವುದಿಲ್ಲ. ಹಾಲಿ ಕೊಳಬೆಬಾವಿಗಳ ಮುಖಾಂತರ ನೀರು ಸರಬರಾಜು ವ್ಯವಸ್ಥೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಿರ್ವಹಿಸುತ್ತಿರುತ್ತದೆ.

ಆದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ 110 ಹಳ್ಳಿಗಳಿಗೆ ಸಂಬಂಧಿಸಿದಂತೆ, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವ ಸಲುವಾಗಿ ` 2379.00 ಕೋಟಿ ಮೊತ್ತಕ್ಕೆ ಸವಿಸ್ತಾರವಾದ ಯೋಜನಾ ವರದಿಯನ್ನು ತಯಾರಿಸಿದ್ದು ಸರ್ಕಾರದ ಆದೇಶ ಸಂ: ನಅಇ 269 ಎಂಎನ್ಐ 2010, ದಿನಾಂಕ: 02.12.2010ರಲ್ಲಿ ಮಂಜೂರಾತಿ ಪಡೆದು ಭಾರತ ಸರ್ಕಾರದ ತಾಂತ್ರಿಕ ಅನುಮೋದನೆ ಹಾಗೂ ಆರ್ಥಿಕ ಅನುದಾನಕ್ಕಾಗಿ ಕಳುಹಿಸಿರುತ್ತದೆ. ಈ ಯೋಜನಾ ವರದಿಯು

2001ನೇ ಜನಗಣತಿ ಆಧಾರದ ಮೇಲೆ ತಯಾರಿಸಿದ್ದರಿಂದ ಇದನ್ನು 2011ನೇ ಜನಗಣತಿ ಆಧಾರದ ಮೇಲೆ 2014ಕ್ಕೆ ತಲುಪುವ ಜನಸಂಖ್ಯೆಗೆ ಅನುಗುಣವಾಗಿ ಪುನರ್ ವಿನ್ಯಾಸಗೊಳಿಸಿ ಸಲ್ಲಿಸುವಂತೆ ಕೇಂದ್ರ ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ ಮತ್ತು ಪರಿಸರ ಸಂಸ್ಥೆ ಸೂಚಿಸಿರುತ್ತದೆ. ಇದರಂತೆ ಪುನರ್ ವಿನ್ಯಾಸಗೊಳಿಸಿ ವರದಿ ತಯಾರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಈ ದಿಸೆಯಲ್ಲಿ ಸರ್ಕಾರದ ಪತ್ರ ಸಂಖ್ಯೆ: ಜಸಂಇ 60 ಎಂಎಂಕೆ 2013, ದಿನಾಂಕ: 02.01.2014 ಹಾಗೂ ಸಂ: ನಅಇ 269 ಎಂಎನ್ಐ 2013 (ಭಾ), ದಿನಾಂಕ: 27.01.2014ರಲ್ಲಿ ಲಭ್ಯವಿರುವ ಕಾವೇರಿ ನೀರಿನ ಬಾಬ್ತು ವಾರ್ಷಿಕ ಸುಮಾರು 10 ಟಿ.ಎಂ.ಸಿ. ನೀರು ಒದಗಿಸಲು ಕ್ರಮತೆಗೆದುಕೊಂಡಿದೆ.

CPHEEO ಸಂಸ್ಥೆಯ ಸೂಚನೆಗಳ ಪ್ರಕಾರ ದಾಸರಹಳ್ಳಿ ವ್ಯಾಪ್ತಿಯಲ್ಲಿ ಬರುವ 11 ಹಳ್ಳಿಗಳಿಗೆ ಸಂಬಂಧಿಸಿದ ಸವಿಸ್ತಾರವಾದ ಯೋಜನಾ ವರದಿ ತಯಾರಿಸಿದ್ದು, CPHEEO, ದೆಹಲಿಗೆ ಅನುಮೋದನೆಗೆ ಮಂಡಿಸಲಾಗುತ್ತದೆ. ತದನಂತರ ಇನ್ನಿತರೆ ವಲಯಗಳಿಗೆ CPHEEO ಸಂಸ್ಥೆಯಿಂದ ಅನುಮೋದನೆ ಪಡೆದು, ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಸ್. ಟಿ. ಸೋಮಶೇಖರ್: ಯಶವಂತಪುರ ವಿಧಾನಸಭಾ ಕ್ಷೇತ್ರದ ಎರಡು ವಾರ್ಡಗಳಿಗೆ ಕಾವೇರಿ ನೀರನ್ನು ಯಾವಾಗ ಕೊಡುತ್ತೀರಿ ಎಂದು ಕೇಳಿದರೆ ನನ್ನ ಕ್ಷೇತ್ರವನ್ನು ಬಿಟ್ಟು ದಾಸರಹಳ್ಳಿ ಕ್ಷೇತ್ರದ ಮಾಹಿತಿಯನ್ನು ಕೊಟ್ಟಿದ್ದಾರೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್: CPHEEO ಸಂಸ್ಥೆಯ ಸೂಚನೆಯ ಪ್ರಕಾರ ದಾಸರಹಳ್ಳಿ ವ್ಯಾಪ್ತಿಯಲ್ಲಿ ಬರುವ 11 ಹಳ್ಳಿಗಳಿಗೆ ಸಂಬಂಧಿಸಿದ ಸವಿಸ್ತಾರವಾದ ಯೋಜನಾ ವರದಿಯನ್ನು ತಯಾರಿಸಿದ್ದು, ವಾರ್ಡ ಸಂಖ್ಯೆ 40 ಮತ್ತು 72ಕ್ಕೆ ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಉತ್ತರ ಕೊಡುತ್ತಿದ್ದೇನೆ.

ಶ್ರಿ ಎಸ್. ಟಿ. ಸೋಮಶೇಖರ್: ದಾಸರಹಳ್ಳಿಯದ್ದು ನಾನು ಕೇಳುತ್ತಿಲ್ಲ. ಯಶವಂತಪುರ ವಿಧಾನಸಭಾ ಕ್ಷೇತ್ರ ದೊಡ್ಡಬಿದರಕಲ್ಲು. ಹೇರೋಹಳ್ಳಿ, ಮುಂತಾದ ವಾಡುಗಳನ್ನು ನಾನು ಕೇಳುತ್ತಿರುವುದು.

ಅಧ್ಯಕ್ಷರು: ಉತ್ತರ ಇದೆಯೇ?

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್: ಇದೆ. ವಾರ್ಡ ಸಂಖ್ಯೆ 40 ಮತ್ತು 72, ಕ್ರಮವಾಗಿ ದೊಡ್ಡಬಿದರಕಲ್ಲು ಮತ್ತು ಹೇರೊಹಳ್ಳಿಗಳಿಗೆ ಸಂಬಂಧಪಟ್ಟಂತೆ ದಾಸರಹಳ್ಳಿ ಹಿಂದಿನ ನಗರಸಭೆಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾದ 110 ಹಳ್ಳಿಗಳಲ್ಲಿ ಒಂದಾಗಿರುತ್ತದೆ.

ಶ್ರೀ ಎಸ್. ಟಿ. ಸೋಮಶೇಖರ್: ಸರ್ಕಾರ ನೀಡಿದ ಲಿಖಿತ ಹೇಳಿಕೆಯ ಕೊನೆಯ ಪ್ಯಾರಾವನ್ನು ಓದಿ. ದಾಸರಹಳ್ಳಿಯ ವ್ಯಾಪ್ತಿಯದ್ದು ಮಾಹಿತಿ ಕೊಟ್ಟುಬಿಟ್ಟರು. ಎಲ್ಲವನ್ನೂ Water Supply ನವರು misguide ಮಾಡಿದ್ದಾರೆ. ನಮ್ಮ ವಾರ್ಡಗಳಿಲಗೆ ಕಾವೇರಿ ನೀರು ಯಾವಾಗ ಕೊಡುತ್ತಾರೆ? ಎಂಬುದನ್ನು ಹೇಳಬೇಕು.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್: ನಿಮ್ಮದೂ ಸಹ ಅದರೊಳಗೆ ಸೇರ್ಪಡೆಯಾಗಿದೆ.

ಶ್ರೀ ಎಸ್. ಟಿ. ಸೋಮಶೇಖರ್: ಇಲ್ಲ, ಇಲ್ಲ, ಅದು ಬೇರೆ, ನಮ್ಮದು ಬೇರೆ. ಅದು 110 ಹಳ್ಳಿಯೊಳಗೇ ಬರುತ್ತದೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್: ಆ 110 ಹಳ್ಳಿಯಲ್ಲಿ ಬಂದಮೇಲೆ ಆ 110 ಹಳ್ಳಿಯದ್ದೂ ಕೂಡ ಯೋಜನಾ ವರದಿ ತಯಾರಿಸ ಲಾಗಿದೆ.

ಅಧ್ಯಕ್ಷರು: ಈಗ ನಿಮಗೆ ಸಮಾಧಾನವಾಗದಿದ್ದರೆ ಬೇರೆ ರೂಪದಲ್ಲಿ ತನ್ನಿ, ಚರ್ಚೆಗೆ ತೆಗೆದುಕೊಳ್ಳೋಣ. ಈಗ ಬಿಡಿ.

ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, 110 ಹಳ್ಳಿಗಳಿಗೆ ಜಲಮಂಡಳಿಯಿಂದ ಕುಡಿಯುವ ನೀರು ಕೊಡುವುದಕ್ಕೆ ಅವಕಾಶ ಇರುವುದಿಲ್ಲ. ಅದಕ್ಕೋಸ್ಕರ ಕೇಂದ್ರ ಸರ್ಕಾರಕ್ಕೆ 2379 ಕೋಟಿ ರೂ.ಪಾಯಿಗಳ ಮೊತ್ತದ ಯೋಜನೆಯನ್ನು ತಯಾರು ಮಾಡಿ ಈ ಹಳ್ಳಿಗಳಿಗೆಲ್ಲಾ ಕುಡಿಯುವ ನೀರು ಕೊಡಲಿಕ್ಕೆ ಒಂದು ಯೋಜನೆಯನ್ನು ಕೇಂದ್ರ ಸರ್ಕರಕ್ಕೆ ಕೊಟ್ಟಿದ್ದಾರೆ. ಅದು ಬಂದಮೇಲೆ ಅದಕ್ಕೆಲ್ಲ ಮಾಡಬೇಕೆಂದು ತೀರ್ಮಾನ ಮಾಡಲಾಗಿದೆ.

ಅಧ್ಯಕ್ಷರು: O. K.

9. ವಿಷಯ: ಕಾವೇರಿ ನ್ಯಾಯಮಂಡಳಿ ಐತೀರ್ಪಿನ ವಿರುದ್ಧ ಕಾವೇರಿ ನದಿ ನೀರಿನ ರಕ್ಷಣೆಯ ಬಗ್ಗೆ ಪ್ರತಿಭಟನೆ ಮಾಡಿದವರ ಮೇಲೆ ದಾಖಲಿಸಿರುವ ಮೊಕದ್ದಮೆಗಳನ್ನು ಹಿಂಪಡೆಯುವ ಬಗ್ಗೆ.

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ): ಮಾನ್ಯ ಅಧ್ಯಕ್ಷರೆ, ಕಾವೇರಿ ನ್ಯಾಯ ಮಂಡಳಿ ಐತೀರ್ಪಿನ ವಿರುದ್ಧ ಕಾವೇರಿ ನದಿ ನೀರಿನ ರಕ್ಷಣೆಯ ಬಗ್ಗೆ ಪ್ರತಿಭಟನೆ ಮಾಡಿದವರ ಮೇಲೆ ದಾಖಲಿಸಿರುವ ಮೊಕದ್ದಮೆಗಳನ್ನು ಹಿಂಪಡೆಯುವ ಬಗ್ಗೆ.

ಶ್ರೀ ಕೆ. ಜೆ. ಜಾರ್ಜ (ಮಾನ್ಯ ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಕಾವೇರಿ ನೀರಿನ ರಕ್ಷಣೆ ವಿಚಾರದಲ್ಲಿ ನ್ಯಾಯಮಂಡಳಿ ಐತೀರ್ಪಿನ ವಿರುದ್ಧ ಮತ್ತು ಕೇಂದ್ರ ಸರ್ಕಾರದ ವಿರುದ್ಧ ನಡೆದ ಘಟನೆಗಳಲ್ಲಿ 2012ರ ಇಸವಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿ 45 ಪ್ರಕರಣಗಳು ದಾಖಲಾಗಿರುತ್ತವೆ. ವಿವರ ಕೆಳಗಿನಂತಿದೆ:

ವರದಿಯಾದ ಒಟ್ಟು ಪ್ರಕರಣಗಳು	ನ್ಯಾಯಾಲಯದ ವಿಚಾರಣೆಯಲ್ಲಿರುವ ಪ್ರಕರಣಗಳು	ವಜಾ / ಬಿಡುಗಡೆ / ಖುಲಾಸೆಗೊಂಡ ಪ್ರಕರಣಗಳು	ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ	ನ್ಯಾಯಾಲಯದಿಂದ ಸಿ.ಸಿ. ಸಂಖ್ಯೆ ಬರಬೇಕಾಗಿದೆ
45	40	0	04	01